ವಿಷಯ :- ಸಿರ್ಸಿ, ಯಲ್ಲಾಪುರ, ಅಂಕೋಲಾ ತಾಲ್ಲೂಕಿನ ಆಸ್ಪತ್ರೆ ಕಟ್ಟಡ ಗಳ ದುರಸ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 796 (1222)

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿರ್ಸಿ, ಯಲ್ಲಾಪುರ, ಅಂಕೋಲಾ ತಾಲ್ಲೂಕಿನಲ್ಲಿ ಆಸ್ಪತ್ರೆ ಕಟ್ಟಡ ದುರಸ್ತಿಗಾಗಿ ಎಷ್ಟು ಪ್ರಸ್ತಾವನೆ ಬಂದಿದೆ?

ಆ) ಈ ಆಸ್ಪತ್ರೆಗಳಿಗಾಗಿ ಮಂಜೂರಾದ ಹಣವೆಷ್ಟು? (ತಾಲ್ಲೂಕುವಾರು ಆಸ್ಪತ್ರೆ) ವಿವರ ನೀಡುವುದು.

ಇ) ಹಣ ಮಂಜೂರಾಗದಿದ್ದಲ್ಲಿ, ಕಾರಣವೇನು (ಆಸ್ಪತ್ರೆವಾರು ವಿವರ ನೀಡುವುದು)

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಸಿರ್ಸಿ, ಯಲ್ಲಾಪುರ, ಅಂಕೋಲಾ ತಾಲ್ಲೂಕಿನಲ್ಲಿ ಆಸ್ಪತ್ರೆ ಕಟ್ಟಡ ದುರಸ್ತಿಗಾಗಿ ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ. ಪ್ರಸ್ತಾವನೆಗಳು ಸಂಬಂಧಪಟ್ಟ ತಾಲ್ಲೂಕು ಪಂಚಾಯತ್‌ಗಳಲ್ಲಿ ನಿರ್ಣಯವಾಗುತ್ತವೆ.

ಆ) ತಾಲ್ಲೂಕು ಪಂಚಾಯತ್ ಕ್ರಿಯಾ ಯೋಜನೆಯಡಿ ಕಟ್ಟಡಗಳ ಮಾರ್ಪಾಡು ಮತ್ತು ಸೇರ್ಪಡೆಗೆ

1) ಅಂಕೋಲಾ ತಾಲ್ಲೂಕಿಗೆ 1996-97 ನೇ ಸಾಲಿನಲ್ಲಿ ರೂ.18,000-00 ಅನುವು ಇರುತ್ತದೆ.
2) ಸಿರ್ಸಿ ತಾಲ್ಲೂಕಿಗೆ 1996-97 ನೇ ಸಾಲಿನಲ್ಲಿ ರೂ. 26,400-00 ಅನುವು ಇರುತ್ತದೆ.
3) ಯಲ್ಲಾಪುರ ತಾಲ್ಲೂಕಿಗೆ 1996-97 ನೇ ಸಾಲಿನಲ್ಲಿ ರೂ. 14,200-00 ಅನುವು ಇರುತ್ತದೆ.

ಇ) ಉದ್ಭವಿಸುವುದಿಲ್ಲ.

ವಿಷಯ :- ಶಿಕಾರಿ ಪುರ ತಾಲ್ಲೂಕಿನಲ್ಲಿ ಕಟ್ಟಡಗಳಿಲ್ಲದೆ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 799 (1296)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಶಿಕಾರಿಪುರ ತಾಲ್ಲೂಕಿನಲ್ಲಿ ಕಟ್ಟಡಗಳಿಲ್ಲದೆ ಇರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳೆಷ್ಟು?

2. ಕಟ್ಟಡ ಕಟ್ಟಲು ಎಷ್ಟು ಹಣ ನೀಡಲಾಗುತ್ತಿದೆ? ಆ ಹಣದಲ್ಲಿ ಕಟ್ಟಡ ಕಟ್ಟಲು ಸಾಧ್ಯವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಾರಿ ರಾಜ್ಯ ವಲಯದಲ್ಲಿ ರೂಪಾಯಿ

3. ಕಟ್ಟಡ ಕಟ್ಟಲು ಹಣ ಹೆಚ್ಚು ನೀಡದೇ ಇದ್ದಲ್ಲಿ ಕಟ್ಟಡ ನಿರ್ಮಾಣಕ್ಕೆ ತೊಂದರೆಯಾಗುವುದು ನಿಜವಲ್ಲವೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

1.	ಪ್ರಾಥಮಿಕ ಶಾಲೆಗಳು	02
2.	ಪ್ರೌಢ ಶಾಲೆಗಳು	01
	ಒಟ್ಟು	03

2. 1. ಪ್ರಾಥಮಿಕ ಶಾಲೆಗಳ ಕೊಠಡಿಯೊಂದರ ನಿರ್ಮಾಣದ ಘಟಕ ವೆಚ್ಚವನ್ನು ರೂ. 65,000 ಗಳೆಂದು ನಿಗಧಿಪಡಿಸಿದ್ದು, ಇದರಲ್ಲಿ ರೂ. 400.00 ಗಳನ್ನು ಶಿಕ್ಷಣ ಇಲಾಖೆಯ ವಂತಿಗೆಯಾಗಿ ನೀಡಲಾಗುತ್ತಿದ್ದು ಉಳಿದ ಹಣವನ್ನು ಜಿಲ್ಲಾ ಪಂಚಾಯತ್ ಗಳು ಜಿ.ಆರ್.ವೈ, ಇ.ಎ.ಎಸ್. ಸ್ಥಳೀಯ ವಂತಿಗೆ, ಜಿಲ್ಲಾ ವಲಯ ಆಯವ್ಯಯ ಈ ಮೂಲಗಳಿಂದ ಭರಿಸಬೇಕಾಗುತ್ತದೆ.

2. ಸರ್ಕಾರಿ ಪ್ರೌಢಶಾಲಾ ಕಟ್ಟಡ ನಿರ್ಮಾಣಕ್ಕೆ 1995-96 ರವರೆಗೆ ಜಿಲ್ಲಾ ಪಂಚಾಯತ್‌ಗಳೇ ಹಣ ಒದಗಿಸಬೇಕಾಗಿತ್ತು. ಆದರೆ ಸರ್ಕಾರವು 1995-96 ರಲ್ಲಿ ಪ್ರಥಮ 245-00 ಲಕ್ಷಗಳನ್ನು ಒದಗಿಸಿ, ಹೊಸ ಪ್ರೌಢಶಾಲಾ ಕಟ್ಟಡ ನಿರ್ಮಾಣ ಒಂದಕ್ಕೆ 1/3 ಭಾಗವಾಗಿ (ಒಂದು ಪ್ರೌಢಶಾಲಾ ಕಟ್ಟಡದ ಅಂದಾಜು ವೆಚ್ಚ ರೂ. 9-00 ಲಕ್ಷಗಳೆಂದು ನಿಗಧಿಪಡಿಸಿ) ರೂ. 3-00 ಲಕ್ಷಗಳಂತೆ ಮತ್ತು ಹಾಲಿ ಕಟ್ಟಡವಿರುವ ಪ್ರೌಢಶಾಲೆಗಳಿಗೆ ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ಕೊಠಡಿಯೊಂದಕ್ಕೆ ತಲಾ ರೂ. 1 ಲಕ್ಷದಂತೆ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿದೆ. 1996-97 ನೇ ಸಾಲಿನಲ್ಲಿಯೂ ರಾಜ್ಯ ವಲಯದಿಂದ ರೂ. 150.00 ಲಕ್ಷಗಳನ್ನು ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿದೆ. ಈ ಹಣದಿಂದ ರೂ. 150.00 ಲಕ್ಷಗಳನ್ನು ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿದೆ. ಈ ಹಣದಿಂದ 1995-96 ನೇ ಸಾಲಿನಲ್ಲಿ ಕೈಗೆತ್ತಿಕೊಂಡ ಕಟ್ಟಡಕ್ಕೆ ಪುನಃ ರೂ. 3.00 ಲಕ್ಷಗಳನ್ನು ವಿನಿಯಯೋಗಿಸಬಹುದಾಗಿರುತ್ತದೆ. ಜೊತೆಗೆ ಜಿಲ್ಲಾ ಪಂಚಾಯತ್‌ಗಳು ನಮ್ಮ ಜಿಲ್ಲಾ ವಲಯದಲ್ಲಿ ನಿಗಧಿಪಡಿಸಿರುವ ಆಯವ್ಯಯದಿಂದ ಕಟ್ಟಡಗಳನ್ನು ಕಟ್ಟಲು ಸಾಧ್ಯವಾಗುವುದು.

ಇ) ಸರ್ಕಾರ ಬಿಡುಗಡೆ ಮಾಡುವ ಹಣಕ್ಕೆ ಜಿಲ್ಲಾ ಪಂಚಾಯತ್‌ಗಳು ತಮ್ಮ ನಿಧಿಯಿಂದ ಮತ್ತು ಜಿ.ಆರ್.ವೈ ನಿಧಿಯಿಂದ ಬಿಡುಗಡೆ ಮಾಡಿ ಮ್ಯಾಪಿಂಗ್ ಹಣ ನೀಡಿದಲ್ಲಿ ತೊಂದರೆಯಾಗುವುದಿಲ್ಲ.

ವಿಷಯ :- ಶೈಕ್ಷಣಿಕ ಸಾಲಿನ ನಡುವೆ ನಿವೃತ್ತಾರಾಗುವ ಸರ್ಕಾರಿ ನರ್ಸರಿ ಶಿಕ್ಷಕರಿಗೆ ನಿಯಮಗಳನ್ವಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 800 (1303)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶೈಕ್ಷಣಿಕ ಸಾಲಿನ ನಡುವೆ ನಿವೃತ್ತರಾಗುವ ನೌಕರರನ್ನು ಸದರಿ ಶೈಕ್ಷಣಿಕ ಸಾಲಿನವರೆಗೆ ಮುಂದುವರೆಸಲು ನಿಯಮವಿಲ್ಲವೇ?

ಆ) ಈ ನಿಯಮವು ನರ್ಸರಿ ಶಿಕ್ಷಕರಿಗೆ ಅನ್ವಯವಾಗುವುದಿಲ್ಲವೇ?

ಇ) ಅನ್ವಯವಾಗದಿದ್ದಲ್ಲಿ ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಇದೆ.

ಆ) ಸರ್ಕಾರಿ ನರ್ಸರಿ ಶಾಲಾ ಶಿಕ್ಷಕರಿಗೂ ಅನ್ವಯಿಸುತ್ತದೆ.

ಇ) ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ವಿಷಯ :- ಡೊನೇಷನ್ ಹಾವಳಿ ತಪ್ಪಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 802 (856)

ಶ್ರೀ ಎನ್. ಯೋಗೇಶ ಭಟ್ (ಮಂಗಳೂರು) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಡೊನೇಷನ್ ಹಾವಳಿ ತಪ್ಪಿಸಲು ಸಮಗ್ರ ಶಿಕ್ಷಣ ಮಸೂದೆಗೆ ಅಂತ್ಯ ತಿದ್ದುಪಡಿಗಳನ್ನು ತರಲು ಸರ್ಕಾರದವರು ಸಮಿತಿಯನ್ನು ರಚಿಸಿರುವರೆ ;

2) ರಚಿಸಿದ್ದರೆ ವರದಿಯನ್ನು ಸಮಿತಿಯವರು ಸರ್ಕಾರದವರಿಗೆ ಸಲ್ಲಿಸಿರುವರೆ ;

3) ಸಮಿತಿಯ ವರದಿಯ ಆಧಾರದ ಮೇಲೆ ಎಷ್ಟು ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ?